**ಸಾಕ್ಷಿಯನ್ನು ದಿಃ *12/02/2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಎಸ್‌ಟಿಪಿ ವಕೀಲರಿಂದ ವಾದಿ ಪರವಾಗಿ.***

ನಾನು ಸದರಿ ದಾವೆಯಲ್ಲಿ ಪ್ರತಿವಾದಿ ನಂ.22 ಇದ್ದು ಪ್ರತಿವಾದಿ ನಂ.9 ನನ್ನ ತಂದೆ ಎಂದರೆ ನಿಜ. ನನ್ನ ತಂದೆಗೆ ನಾನು ಮತ್ತು ನನ್ನ ತಮ್ಮ ಇಬ್ಬರೂ ಮಕ್ಕಳು. ನಾವು ಮತ್ತು ಎಲ್ಲ ವಾದಿಯರು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರು ಎಂದರೆ ನಿಜ. ನಮ್ಮದು ಹಿರಿಯರ ಆಸ್ತಿ ಎಂದರೆ ಸರಸ್ವತಪೂರದಲ್ಲಿರುವ ಮನೆ ಎಂದರೆ ನಿಜ. ಸದರಿ ಮನೆಯಲ್ಲಿ 20 ಜನ ವಾಸವಿರುತ್ತಾರೆ.

ನನ್ನ ಮನೆತನದ ಕುರಿತು ನನಗೆ ಮಾಹಿತಿ ಇದೆ. ನಾವು ಮೂಲತ ಬೆಳಗಾವಿಯ ರಾಮದುರ್ಗ ತಾಲೂಕಿನ ತೋರಗಲ್ ಗ್ರಾಮದ ರಹವಾಸಿಗಳು ಇರುತ್ತೇವೆ. ಸದರಿ ಗ್ರಾಮದಲ್ಲಿ ನಮ್ಮ ಆಸ್ತಿಯಲ್ಲಿ ಒಂದು ದೇವಸ್ಥಾನ ಕಟ್ಟಿರುತ್ತೇವೆ. ಸದರಿ ದೇವಸ್ಥಾನದ ಪಿಪಿಸಿ ನಂಬರ ಹೇಳಲು ಬರುವುದಿಲ್ಲ. ಇವತ್ತಿಗೂ ಸಹ ಸದರಿ ಆಸ್ತಿ ನನ್ನ ದೊಡ್ಡ ಚಿಕ್ಕಪ್ಪನಾದ ನಾರಾಯಣ ರೇಗೆ ಇವರ ಹೆಸರಿನಲ್ಲಿರುತ್ತದೆ. ಸದರಿ ಆಸ್ತಿ ಕುರಿತು ಇರುವ ದಾಖಲೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಆಸ್ತಿಯನ್ನು ಹೊರತುಪಡಿಸಿ ತೋರಗಲ್ ಗ್ರಾಮದಲ್ಲಿ ಯಾವ ಆಸ್ತಿಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಹೂಡಿದ ನಂತರವೂ ಸಹ ನಾನು ನಮ್ಮ ಕುಟುಂಬಕ್ಕೆ ಯಾವ ಯಾವ ಆಸ್ತಿಗಳು ಇವೆ ಎಂದು ದಾಖಲೆ ತೆಗೆಸಿ ವಿಚಾರಿಸಿಲ್ಲ. ತೋರಗಲ್ ಗ್ರಾಮದಲ್ಲಿ ನಾನು ಹೇಳಿರುವಂತ ದೇವಸ್ಥಾನವಿರುವುದಿಲ್ಲ ಮತ್ತು ನನ್ನ ಅಜ್ಜನಿಗೆ ಸೇರಿದ ಯಾವುದೇ ಆಸ್ತಿ ಅಲ್ಲಿ ಉಳಿದಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ನಾನು ನೀಡಿರುವ ಪ್ರತಿವಾದ ಪತ್ರದಲ್ಲಿ ಸದರಿ ದೇವಸ್ಥಾನದ ಕುರಿತು ಯಾವುದೇ ಉಲ್ಲೇಖ ಮಾಡಿಲ್ಲ ಎಂದರೆ ನಿಜ.

ನಾವು ಬೆಳಗಾವಿಯ ರಾಮದುರ್ಗ ತಾಲೂಕಿನ ತೋರಗಲ್ ಗ್ರಾಮದಿಂದ ಧಾರವಾಡಕ್ಕೆ 1855 ರ ನಂತರದ ಇಸ್ವಿಯಲ್ಲಿ ಬಂದೆವು ಎಂದು ಕೇಳಿದ್ದೇನೆ. ಆ ಸಮಯದಲ್ಲಿ ನಮ್ಮ ಮನೆತನಕ್ಕೆ ಧಾರವಾಡದಲ್ಲಿ ಯಾವುದೇ ಆಸ್ತಿಗಳು ಇರಲಿಲ್ಲ. ಈ ರೀತಿ 1855 ರ ನಂತರದ ಇಸ್ವಿಯಲ್ಲಿ ನನ್ನ ಅಜ್ಜ ಮಾಧವರಾವ ರೇಗೆ ಮತ್ತು ಶಂಕರರಾವ ರೇಗೆ ಇವರು ಧಾರವಾಡಕ್ಕೆ ಬಂದಿರುತ್ತಾರೆ. ಈ ಮೊದಲು ಅವರು ಟಿಕಾರೆ ರಸ್ತೆಯ ಗೋಪಾಲಕೃಷ್ಣ ಮಂಗಲ ಕಾರ್ಯಾಲಯದಲ್ಲಿ ಬಾಡಿಗೆ ನಾತೆಯಿಂದ ವಾಸವಿದ್ದರು. ಮಾದವರಾವ

ಇವರು 1947 ನೇ ಇಸ್ವಿಯಲ್ಲಿ ಮತ್ತು ಶಂಕರರಾವ ಇವರು 1973 ರಲ್ಲಿ ತೀರಿಕೊಂಡಿರುತ್ತಾರೆ. ತೀರಿಹೋದಾಗ ಅವರುಗಳ ವಯಸ್ಸು ನನಗೆ ಗೊತ್ತಿಲ್ಲ. ಇಬ್ಬರಲ್ಲಿ ಯಾರು ಸಹ ನೂರು ವರ್ಷಗಳ ಕಾಲ ಬಾಳಲಿಲ್ಲ. ಆದ್ದರಿಂದ ನನ್ನ ಅಜ್ಜಂದಿರು 1855-60 ರ ನಂತರದ ಇಸ್ವಿಯಲ್ಲಿ ಧಾರವಾಡಕ್ಕೆ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ರೀತಿ ಅವರು ಧಾರವಾಡಕ್ಕೆ ಬಂದಾಗ ಅವರ ಮದುವೆಯಾಗಿತ್ತೊ ಇಲ್ಲವೂ ನನಗೆ ಗೊತ್ತಿಲ್ಲ. ಈ ರೀತಿ ಮಾಧವರಾವ ಒಬ್ಬರೆ ಒಂದು ಮಿಠಾಯಿ ಅಂಗಡಿ ಇಟ್ಟುಕೊಂಡಿದ್ದರು. ಈ ರೀತಿ ಎಷ್ಟು ವರ್ಷಗಳ ಕಾಲ ಅಂಗಡಿ ನಡೆಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮಾದವರಾವ ಒಬ್ಬರೆ ಮಿಠಾಯಿ ಅಂಗಡಿ ನಡೆಸಿದ್ದರು ಎಂದು ತೋರಿಸಲು ದಾಖಲೆ ಇಲ್ಲ. ಆ ಸಮಯದಲ್ಲಿ ಶಂಕರರಾವ ಇವರು ಏನೂ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಮಾರುತಿ ಮೋಟಾರ್ಸನ್ನು ಮಾಧವರಾವ ಇವರು ನಡೆಸುವ ಬಗ್ಗೆ ಹೇಳಿದ್ದು ನಿಜ ಆದರೆ ಯಾವ ಇಸ್ವಿ ಎಂದು ನನಗೆ ಗೊತ್ತಿಲ್ಲ. ಈ ಕುರಿತು ಒಂದು ಪ್ರಕಟಣೆ (ನಿ.ಡಿ.1) ಮತ್ತು ಬ್ಯಾಂಕ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಿ.ಡಿ.1 ರಲ್ಲಿ ಇಸ್ವಿ ಇರುತ್ತದೆ ಆದರೆ ಹಳೆಯದು ಇರುವ ಕಾರಣ ಯಾವ ಇಸ್ವಿಯದು ನನಗೆ ಗೊತ್ತಾಗುತ್ತಿಲ್ಲ. ಸದರಿ ದಾಖಲೆಯಲ್ಲಿ ತಾರೀಖು, ತಿಂಗಳು ಮತ್ತು ಇಸ್ವಿ ನಮೂದು ಆಗಿಲ್ಲ, ಪುಟದ ಕೊನೆಯಲ್ಲಿ ಕಾಣುತ್ತಿರುವ ನಂಬರ ಪ್ರಿಂಟಿಂಗ್ ಪ್ರೇಸ ಕೋಡ ಇದೆ ಎಂದರೆ ಇರಬಹುದು. ಸದರಿ ದಾಖಲೆ ಒಂದು ತಿಂಗಳ ಹಿಂದೆ ನಮ್ಮ ಮನೆಯ ಹಳೆ ಅಲಮಾರನಲ್ಲಿ ಪತ್ತೆಯಾಯಿತು. ಸದರಿ ಮಾರುತಿ ಮೋಟಾರ್ಸ ನೊಂದಾಯಿತ ಕಂಪನಿಯೋ ಅಲ್ಲವೋ ಎಂದು ನನಗೆ ಮಾಹಿತಿ ಇಲ್ಲ. ಮಾರುತಿ ಮೋಟಾರ್ಸ ಅಸ್ತಿತ್ವದಲ್ಲಿತ್ತು ಎಂದು ತೋರಿಸಲು ಸದರಿ ಪ್ರಕಟಣೆ ಹೊರತುಡಿಪಸಿ ಬೇರೆ ದಾಖಲೆ ಇಲ್ಲ ಎಂದರೆ ಸಾಕ್ಷಿದಾರರು ನಿ.ಡಿ.2 ರಿಂದ 5 ರವರೆಗೆ ಇರುವ ಬ್ಯಾಂಕ ದಾಖಲೆಗಳು ಇವೆ ಎಂದು ಉತ್ತರಿಸುತ್ತಾರೆ. ಸದರಿ ದಾಖಲೆಗಳ ಮೇಲೆ ಮಾಧವರಾವ ಏ ರೇಗೆ ಎಂದು ನಂತರ ಕರಿಯ ಮಸಿಯ ಪೆನ್ನಿನಿಂದ ಬರೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳಲ್ಲಿ ಬ್ಯಾಂಕ ಖಾತೆಯ ನಂಬರ ಇಲ್ಲ. ಯಾವ ಸ್ವರೂಪದ ಖಾತೆ ಇದೆ ಎಂದು ನಮೂದು ಇಲ್ಲ ಮತ್ತು ನನಗೆ ಹೇಳಲು ಬರುವುದಿಲ್ಲ. ಸದರಿ ದಾಖಲೆಗಳ ಮೇಲೆ "ಇನ್ ಅಕೌಂಟ ಕರೆಂಟ ವಿತ್ ಕೆನರಾ ಬ್ಯಾಂಕ ಲಿಮಿಟೆಡ್" ಎಂದು ನಮೂದು ಆಗಿರುತ್ತದೆ ಎಂದರೆ ನಿಜ.

ಸದರಿ ಖಾತೆಗಳು ಧಾರವಾಡ ಬ್ರಾಂಚನದು ಇರುತ್ತದೆ. ಈ ರೀತಿ ಧಾರವಾಡ ಬ್ರಾಂಚ ಎಂದು ಬರೆದಿರುವ ಬರಹ ಪ್ರಿಂಟೆಡ್ ಫಾರಮೆಟನಲ್ಲಿರುವುದಿಲ್ಲ ನಂತರ ಅದರಲ್ಲಿ ಸೇರಿಸಿದ ಹಾಗೇ ಕಾಣುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಖಾತೆಗಳು 1937 ರಿಂದ 1942 ರವರೆಗೆ ಇರುವ ಖಾತೆಗಳು. ಸದರಿ ದಾಖಲೆಗಳನ್ನು ದಾವೆಯ ಸಲುವಾಗಿ ಸೃಷ್ಟೀಕರಣ ಮಾಡಿರುವ ಖೊಟ್ಟಿ ದಾಖಲಾತಿಗಳು ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಖಾತೆಗಳು ಧಾರವಾಡ ಬ್ರಾಂಚನದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾರುತಿ ಮೋಟಾರ್ಸ ಎಂದು ಯಾವುದೇ ಕಂಪನಿ ಅಸ್ತಿತ್ವದಲ್ಲಿ ಇರದೇಇದ್ದರೂ ಸಹ ದಾವೆಗೆ ಅನುಕೂಲವಾಗಲಿ ಎಂದು ಸೃಷ್ಟೀಕರಣ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಿ.ಡಿ.6 ರಂತೆ ಇರುವ ದಾಖಲೆ ನಾವುಗಳು ಧಾರವಾಡ ಹುಬ್ಬಳ್ಳಿ ಲೋಕಲ್ ಮೋಟಾರ್ಸ ಸರ್ವೀಸ ಯುನಿಯನ್ ಅವರಿಂದ ಆಸ್ತಿಯನ್ನು ಖರೀದಿ ಮಾಡಿದಕ್ಕೆ ನೀಡಿರುವ ರಶೀದಿ ಇರುತ್ತದೆ. ಸದರಿ ರಶೀದಿಗೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಸದರಿ ದಾವೆಯಲ್ಲಿ ಪ್ರತಿವಾದ ಪತ್ರವನ್ನು ನಾನೇ ಸಲ್ಲಿಸಿರುತ್ತೇನೆ, ಅದರ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನಮ್ಮ ಮನೆತನದ ಕುರಿತು ಎಲ್ಲ ವಿಷಯ ಸಂಗತಿಗಳನ್ನು ನನ್ನ ಪ್ರತಿವಾದ ಪತ್ರದಲ್ಲಿ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣಪತ್ರದ 3 ನೇ ಖಂಡಿಕೆಯಲ್ಲಿ ಬರೆದಿರುವ ನಮ್ಮ ಮನೆತನದವರು ಒಟ್ಟಿಗೆ ಇದ್ದು ಮತ್ತು ಒಟ್ಟಿಗೆ ವ್ಯಾಪಾರ ಮಾಡುತ್ತಿರಲಿಲ್ಲ ಎನ್ನುವ ವಿಷಯ ಸಂಗತಿ ನಿಜವಿರುತ್ತದೆ. ದಾವಾದಾಸ್ತಿಗಳು ಸದರಿ ಶಂಕರರಾವ ಮನೆತನದವರಿಗೆ ಸಂಬಂಧವಿಲ್ಲ ಎಂದು ಬರೆದಿರುವುದು ಸಹ ನಿಜವಿರುತ್ತದೆ. ಆದರೆ ಶಂಕರರಾವ ಮನೆಯವರೆಲ್ಲ ಸರಸ್ವತಪೂರ ಮನೆ ಮಾಧವರಾವ ಇವರ ಮನೆಯವರ ಜೊತೆಗೆ ವಾಸವಿದ್ದರು ಎಂದು ಬರೆದಿರುವುದು ನಿಜವಿರುತ್ತದೆ. ನನ್ನ ಪ್ರಮಾಣಪತ್ರ ಬರೆದಿದ್ದು ನಮ್ಮ ವಕೀಲರಾದ ಪ್ರೀತಂ ರೇಗೆ ಮತ್ತು ವಿ.ಬಿ.ಡವಲೇಶ್ವರ ವಕೀಲರು. ಸದರಿ ಪ್ರೀತಂ ರೇಗೆ ವಕೀಲರು ನಮ್ಮ ಮನೆತನದವರು ಮತ್ತು ಈ ದಾವೆಗೆ ಪಕ್ಷಗಾರರು ಸಹ ಇರುತ್ತಾರೆ ಎಂದರೆ ನಿಜ. ಪ್ರೀತಂ ರೇಗೆ ಇವರು ದಾವಾದಾಸ್ತಿ ಸಂಬಂಧಿತ ಡಿಆರಟಿ ಟ್ರಿಬ್ಯೂನಲ್ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿರುವ ವಿಷಯ ಸಂಗತಿ ಸಹ ನನಗೆ ಗೊತ್ತಿಲ್ಲ. ನಿ.ಡಿ.19 ರಂತೆ ಇರುವ ದಾಖಲೆ ಸಿಟಿಎಸ್ ನಂ.171 ಎಂಎಫ ಮತ್ತು ನಿ.ಡಿ.20 ರಂತೆ ಇರುವ ದಾಖಲೆ ಸಿಟಿಎಸ್ ನಂ.171 ಎಂಎಫ

ಇರುತ್ತದೆ. ಈ ದಾಖಲೆ 1942 ರ ದಾಖಲೆ ಎಂದರೆ ನಿಜ. ಸದರಿ ದಾಖಲೆ ಮಾಧವರಾವ ರೇಗೆ ಇವರು ಲೀಸ ಪಡೆದುಕೊಂಡಿರುವ ಕುರಿತು ಇರುತ್ತದೆ. ಸದರಿ ದಾಖಲೆಯ 5 ನೇ ಪುಟದಲ್ಲಿ ಬರೆದಿರುವ ವಿಷಯ ಸಂಗತಿ ನನಗೆ ಗೊತ್ತಿಲ್ಲ, ಸದರಿ ದಾಖಲೆ ಮಾದವರಾವ ರೇಗೆ ಇವರು ಸದರಿ ಆಸ್ತಿಯನ್ನು ಲೀಜ ಪಡೆದರು ಎಂದು ತೋರಿಸಲು ಮಾತ್ರ ದಾಖಲಿಸಿದ್ದೇನೆ. (ಸದರಿ ದಾಖಲೆಯ 5 ನೇ ಪುಟದಲ್ಲಿ ಬರೆದಿರುವ ವಿಷಯವನ್ನು ವಕೀಲರು ಸಾಕ್ಷಿದಾರರಿಗೆ ಓದಿ ಹೇಳಿರುತ್ತಾರೆ.) ಸದರಿ ಬರೆದಿರುವ ವಿಷಯ ಸಂಗತಿ ನಿಜವಿರುತ್ತದೆ. ನಿ.ಡಿ.20 ರಂತೆ ಇರುವ ದಾಖಲೆಯಲ್ಲಿ ಸಹ ಇದೇ ರೀತಿ ವಿಷಯ ಸಂಗತಿ ಇರುತ್ತದೆ ಅದನ್ನು ಸಹ ವಾದಿ ಪರ ವಕೀಲರು ಓದಿ ಹೇಳಿರುತ್ತಾರೆ, ಅದನ್ನು ಸಾಕ್ಷಿದಾರರು ಕೇಳಿ ನಿಜವಿರುತ್ತದೆ ಎಂದು ಹೇಳುತ್ತಾರೆ. ಈ ಎರಡು ದಾಖಲೆಗಳು ದಿಃ12-08-1942 ರಂದು ನೊಂದಾಗಿರುತ್ತವೆ ಎಂದರೆ ನಿಜ. ಸದರಿ ದಾಖಲೆಗಳು 30 ವರ್ಷಗಳ ಅವಧಿಯ ಷರತ್ತಿಗೆ ಸಂಬಂಧಿಸಿದ ದಾಖಲೆಗಳು ಎಂದರೆ ನಿಜ. ಈ ರೀತಿ ಮೂವತ್ತು ವರ್ಷದ ನಂತರ ಸದರಿ ಆಸ್ತಿಗಳು ಏನಾದಾವು ಎಂದರೆ ಸಾಕ್ಷಿದಾರರು ಹಳೆ ಕಟ್ಟಡ ಕೆಡವಿ ರಿನಿವಲ್ ಮಾಡಲಾಗಿರಬಹುದು, ಆದರೆ ನಮ್ಮ ಹತ್ತಿರ ಯಾವುದೇ ದಾಖಲೆಗಳು ಇಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿದಾರರಿಗೆ ಒಂದು ದಾಖಲಾತಿ ತೋರಿಸಲಾಗಿ, ಆ ದಾಖಲಾತಿ ಸಿಟಿಎಸ್ ನಂ.171/1/ಎಂಎಫ ಪ್ಲಾಟ ನಂ.4, 6 ಮತ್ತು 7 ಇವುಗಳ ಕುರಿತು ಖರೀದಿ ಪತ್ರ ಇದ್ದು, ಸದರಿ ಖರೀದಿಯನ್ನು ನಾರಾಯಣ, ಮಂಗೇಶ, ಜಗದೀಶ, ಶಾಂತಾರಾಮ, ಸಕಾರಾಮ, ವಸಂತ, ಮಧುಕರ, ಜಯವಂತ ಮತ್ತು ಅರವಿಂದ ಇವರು ಖರೀದಿ ಮಾಡಿದ್ದಾರೆ ಎಂದು ಸೂಚಿಸಲಾಗಿ ಸದರಿ ದಾಖಲೆಯನ್ನು ಸಾಕ್ಷಿದಾರರು ನೋಡಿ ನನಗೆ ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ. ಈ ಮೇಲೆ ಹೇಳಿರುವ ಸಿಟಿಎಸ್ ಆಸ್ತಿ ನಂಬರ ನಮಗೆ ಸೇರಿದ್ದು, ಸುಭಾಶ ರಸ್ತೆಯಲ್ಲಿರುವ ಆಸ್ತಿ ಎಂದರೆ ನಿಜ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.